





ಸುತ್ತಮುತ್ತಲು ಪಶ್ಚಿಮಘಟ್ಟದ ದಟ್ಟಕಾನನದಿಂದ ಮಕರಂದ ಯಥೇಚ್ಛವಾಗಿ ಸಿಗುವ ಕಾರಣ ಜೇನ್ನೊಣಗಳು ಈ ಮರವನ್ನು ಆಶ್ರಯಿಸಿದ್ದವು. ಸಮೀಪದಲ್ಲಿಯೇ ಹೂ ತುಂಬಿದ ಮರಗಳು ಸಾಕಷ್ಟು ಕಂಡವು. ರಸ್ತೆ ಪಕ್ಕದ ಇನ್ನೊಂದು ಬದಿಯಲ್ಲಿ ವಿಶಾಲವಾದ ಕೆರೆಯೊಂದು ಇರುವುದರಿಂದ ನೀರಿಗೂ ಇಲ್ಲಿ ಬರವಿಲ್ಲ.

ಈ ಜೇನುಹಿಂಡು ಆಶ್ರಯಿಸಿರುವುದು ಹೆದ್ದಾರಿ ಬದಿಯಲ್ಲಿರುವ ಪುರಾತನ ಸಾತೋ ಶಹೀದ್ ದರ್ಗಾದ ಹಿಂಬದಿಯ ಮರವೊಂದರ ಮೇಲೆ. ಈ ದರ್ಗಾ ಕೂಡ ಪ್ರಸಿದ್ಧವೇ. ಈ ಮಾರ್ಗದಲ್ಲಿ ಸಾಗುವ ಭಕ್ತರು ಇಲ್ಲಿ ನಿಂತು ದರ್ಗಾಕ್ಕೆ ಭೇಟಿ ನೀಡಿಯೇ ಮುನ್ನಡೆಯುವರು. ಜೇನಿನ ಸವಿ ಮತ್ತು ಭಕ್ತಿಯ ಸಿಹಿ – ಎರಡೂ ಒಮ್ಮೆಗೇ ಮನಸ್ಸುತುಂಬುವ ತಾಣವದು.

ಪ್ರತಿಕ್ರಿಯಿಸಿ: **feedback@sudha.co.in**